# ನಾಳೆಯಿಂದ ರಾತ್ರಿ ಕರ್ಫ್ಯೂ

## ರಾಜ್ಯದ 8 ಕಡೆ ಜಾರಿ | 11ರಿಂದ ನಾಲ್ಕು ದಿನ ಲಸಿಕೆ ಉತ್ಸವ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 9-4-21

ವ್ಯಾಪಕವಾಗುತ್ತಿರುವ ಕರೊನಾ ಸೋಂಕನ್ನು ಕಟ್ಟಿಹಾಕುವ ಉದ್ದೇಶದಿಂದ ರಾಜಧಾನಿ ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ ರಾಜ್ಯದ 8 ಕಡೆ ಏ.10ರಿಂದ 20ರವರೆಗೆ ರಾತ್ರಿ ಕರ್ಫ್ಯೂ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಕರೊನಾ ನಿಯಂತ್ರಣ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಗುರುವಾರ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ನಡೆಸಿದ ವಿಡಿಯೋ ಸಂವಾದದ ಬಳಿಕ ಸಿಎಂ ಯಡಿಯೂರಪ್ಪ ಸುದ್ದಿಗೋಷ್ಠಿ ನಡೆಸಿ ಈ ತೀರ್ಮಾನ ಪ್ರಕಟಿಸಿದರು.

### ಎಲ್ಲೆಲ್ಲಿ ಜಾರಿ?

ಬೆಂಗಳೂರು, ಮೈಸೂರು ಮಂಗಳೂರು, ಕಲಬುರಗಿ, ಬೀದರ್, ತುಮಕೂರು, ಉಡುಪಿ-ಮಣಿಪಾಲ

ಕರೊನಾ ಕರ್ಫ್ಯೂ ಅವಧಿ ರಾತ್ರಿ 10 ಗಂಟೆಯಿಂದ ಬೆಳಗ್ಗೆ 5 ಗಂಟೆಯವರೆಗೆ ಜಾರಿಯಲ್ಲಿರಲಿದೆ. ಪ್ರಧಾನಿ ನರೇಂದ್ರ ಮೋದಿ ಜತೆಗಿನ ಸಂವಾದ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ತೀರ್ಮಾನ ಪ್ರಾಯೋಗಿಕ ಮಾತ್ರ. ಅಗತ್ಯಬಿದ್ದರೆ ರಾಜ್ಯದ ಇತರ ಕಡೆಗೂ ರಾತ್ರಿ ಕರ್ಫ್ಯೂ ವಿಸ್ತರಿಸುವುದಾಗಿ ಸಿಎಂ ಎಚ್ಚರಿಸಿದರು. ಬೆಂಗಳೂರು ಮತ್ತು ಇತರ 6 ಜಿಲ್ಲೆಗಳಲ್ಲಿ ಹೆಚ್ಚು ಕೋವಿಡ್ ಪ್ರಕರಣ ವರದಿಯಾಗುತ್ತಿವೆ. ಮರಣ ಪ್ರಮಾಣ ರಾಜ್ಯದಲ್ಲಿ ಶೇ. 0.50ರಷ್ಟು ಇರುವುದು ಸಮಾಧಾನದ ಸಂಗತಿ. ಈ ಕುರಿತು ಕೇಂದ್ರ ಸರ್ಕಾರವೂ ತೃಪ್ತಿ ವ್ಯಕ್ತಪಡಿಸಿದೆ, ಪ್ರಧಾನಿ ಕರೆ ನೀಡಿರುವಂತೆ ರಾಜ್ಯದಲ್ಲೂ ಏ.11ರಿಂದ 14ರ ವರೆಗೆ ಲಸಿಕಾ ಆಂದೋಲನ ಹಮ್ಮಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

● ಪುಟ 4



ಪ್ರಧಾನಿ ನರೇಂದ್ರ ಮೋದಿ ಜತೆ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡ ಸಿಎಂ ಯಡಿಯೂರಪ್ಪ. ಆರೋಗ್ಯ ಸಚಿವ ಸುಧಾಕರ್ ಹಾಗೂ ಇನ್ನಿತರ ಅಧಿಕಾರಿಗಳು ಇದ್ದಾರೆ.

» ರಾತ್ರಿ 10ರಿಂದ ಬೆಳಗ್ಗೆ 5ರವರೆಗೆ ಅನಗತ್ಯ ಸಂಚಾರಕ್ಕೆ ಕಡಿವಾಣ

### ನಿಯಮಗಳೇನು?

ಕರೊನಾ ಕರ್ಫ್ಯೂ ಜಾರಿಯಲ್ಲಿದ್ದಾಗ ಅಗತ್ಯ ಸೇವೆಗಳು ಅಬಾಧಿತ. ಬಸ್ ಸಂಚಾರಕ್ಕೂ ಅಡ್ಡಿ ಇಲ್ಲ. ತುರ್ತು, ಅಗತ್ಯ ಕೆಲಸಗಳಿಗೆ ಹೋಗುವವರಿಗೆ ತಡೆ ಇಲ್ಲ.

### ರಾಜ್ಯಗಳಿಗೆ ಮೋದಿ ಟಾಸ್ಕ್

- ಸರ್ವಪಕ್ಷ ಸಭೆ ಕರೆದು ವಿಶ್ವಾಸಕ್ಕೆ ತೆಗೆದುಕೊಳ್ಳುವುದು, ಟೆಸ್ಟಿಂಗ್ ಪ್ರಮಾಣ ಗಣನೀಯವಾಗಿ ಹೆಚ್ಚಿಸುವುದು
- ಜನಪ್ರತಿನಿಧಿಗಳ ವೆಬಿನಾರ್ ಮಾಡುವುದು
- 72 ಗಂಟೆಗಳಲ್ಲಿ ಸೋಂಕಿತನ 30 ಸಂಪರ್ಕಿತರನ್ನಾದರೂ ಪತ್ತೆ ಮಾಡುವುದು
- ಡೆತ್ ಆಡಿಟ್ ಕಡ್ಡಾಯ ಮಾಡಿಸಿ, ಗಮನವಹಿಸುವುದು, ಇಡೀ ಪ್ರದೇಶ ಕಂಟೈನ್ಮೆಂಟ್ ಮಾಡುವ ಬದಲು ಮೈಕ್ರೋಕಂಟೈನ್ಮೆಂಟ್‌ಗೆ ಒತ್ತು

# ನಾಳೆಯಿಂದ ರಾತ್ರಿ ಕರ್ಫ್ಯೂ

ವಿ.ವಾ. 9-4-21

**ಮೊದಲನೇ ಪುಟದಿಂದ...**

ಯುವಜನರು ಮುನ್ನೆಚ್ಚರಿಕೆಯ ಕ್ರಮಗಳನ್ನು ತಪ್ಪದೆ ಪಾಲಿಸುವ ಕುರಿತು ಆದ್ಯತೆ ನೀಡುವಂತೆ ಸಭೆಯಲ್ಲಿ ಪ್ರಧಾನಿ ಸಲಹೆ ನೀಡಿದರು. ಕೋವಿಡ್ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸುವಂತೆ ಹಾಗೂ ನಿಖರತೆಗೆ ಆದ್ಯತೆ ನೀಡುವಂತೆ, ಆಂಬುಲೆನ್ಸ್, ಆಕ್ಸಿಜನ್ ಪೂರೈಕೆ ಹಾಗೂ ವೆಂಟಿಲೇಟರ್ ಸೌಲಭ್ಯಗಳಿಗೆ ಗಮನ ನೀಡುವಂತೆ ಸಲಹೆ ನೀಡಿದ್ದಾರೆ, ನಾವು ಈ ಬಗ್ಗೆ ಕ್ರಮಕೈಗೊಳ್ಳುತ್ತೇವೆ ಎಂದು ಬಿಎಸ್‌ವೈ ಹೇಳಿದರು.

ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಜಾತ್ರೆ, ಹಬ್ಬಗಳು ಮತ್ತಿತರ ಧಾರ್ಮಿಕ ಮತ್ತು ಸಾಮಾಜಿಕ ಸಮಾವೇಶಗಳನ್ನು ನಿಷೇಧಿಸಲಾಗಿದೆ. ಈ ಮಾರ್ಗಸೂಚಿಗಳ ಕಟ್ಟುನಿಟ್ಟಿನ ಅನುಷ್ಠಾನ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧಾರಣೆ ಮಾಡದ, ವ್ಯಕ್ತಿಗತ ಅಂತರ ಕಾಯ್ದುಕೊಳ್ಳದವರಿಗೆ ದಂಡ ವಿಧಿಸಲಾಗುತ್ತಿದೆ ಎಂದು ತಿಳಿಸಿದರು.

### ಕರ್ನಾಟಕದ ಸ್ಥಿತಿಗತಿ

- ಪ್ರತಿದಿನ 6,000 ಲಸಿಕಾ ಕೇಂದ್ರ ಕಾರ್ಯ ನಿರ್ವಹಿಸುತ್ತಿವೆ, 53 ಲಕ್ಷ ಜನರಿಗೆ ಲಸಿಕೆ ಹಾಕಲಾಗಿದೆ
- ಟೆಸ್ಟಿಂಗ್ ಪ್ರಮಾಣ ಹೆಚ್ಚಿಸಲಾಗಿದೆ, ಶೇ.95ಕ್ಕೂ ಹೆಚ್ಚು ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಗುತ್ತಿದೆ
- 42 ಸಾವಿರ ಸಾಮಾನ್ಯ ಹಾಸಿಗೆ, 30 ಸಾವಿರ ಆಮ್ಲಜನಕ ಸಂಪರ್ಕವಿರುವ ಹಾಸಿಗೆ ಹಾಗೂ 3 ಸಾವಿರ ಐಸಿಯುಗಳಿವೆ
- ತುರ್ತು ಬಳಕೆಗಾಗಿ 2900 ವೆಂಟಿಲೇಟರ್‌ಗಳಿರುವ ಹಾಸಿಗೆ ಲಭ್ಯ, ಪಿಎಂ-ಕೇರ್ಸ್ ನಿಧಿಯಿಂದ ಆಕ್ಸಿಜನ್ ಜನರೇಟರ್ ಒದಗಿಸಲು ಮನವಿ ಮಾಡಲಾಗಿದೆ